ಹೊರಟುಬಿಟ್ಟರು.

ಹೇಗೂ ರಾಷ್ಟ್ರೀಯ ಹೆದ್ದಾರಿಯವರು ಕಡಿಯುತ್ತಾರೆ ಎಂದು ನುಣುಚಿಕೊಂಡಿದ್ದ ಮೆಟ್ರೋದವರಿಗೆ ಈಗ ಪೀಕಲಾಟಕ್ಕಿಟ್ಟುಕೊಂಡಿತು. ಮೊದಲು ಫ್ಲೈಓವರ್‌ನ ನೀಲಿನಕ್ಷೆ ತಯಾರಾಗದೇ ಮೆಟ್ರೋದ ಸ್ಕೆಚ್ ತಯಾರಾಗಲು ಸಾಧ್ಯವಿರಲಿಲ್ಲ. ತಾವೇ ನೇರವಾಗಿ ಮುಂದುವರೆಯೋಣವೆಂದರೆ, ಈ ಮುಖ್ಯಮಂತ್ರಿ ಇರುವವರೆಗೆ ಅದು ಸಾಧ್ಯವೇ ಇಲ್ಲ ಎಂದು ಕಾದು ನೋಡುವ ತಂತ್ರ ಅನುಸರಿಸಿಲಾರಂಭಿಸಿದರು.

ದೆಹಲಿಯಲ್ಲಿ ಪ್ರಧಾನಮಂತ್ರಿಗಳ ಮಹತ್ವಾಕಾಂಕ್ಷೆಯ ಸುವರ್ಣ ಅಷ್ಟಪಥ ಯೋಜನೆಯ ಕಾಮಗಾರಿಯ ಪ್ರಗತಿಯನ್ನು ಕುರಿತು ಕರೆಯಲಾಗಿದ್ದ ಸಭೆಯಲ್ಲಿ ಯಾಕೆ ಆ ಕಾಮಗಾರಿಯನ್ನು ಆರಂಭಿಸಿಲ್ಲವೆಂಬ ಬಗ್ಗೆ ಗಂಭೀರವಾಗಿ ಚರ್ಚೆಯಾಯಿತಂತೆ. ಮುಖ್ಯಮಂತ್ರಿಯೇ ಆ ಸಭೆಯಲ್ಲಿ ಭಾಗವಹಿಸಿದ್ದರಂತೆ. 'ಇಲ್ಲ, ಅಲ್ಲಿ ರಸ್ತೆ ಮಧ್ಯೆಯೇ ಒಂದು ಬೃಹತ್ ಅರಳೀಮರವಿದೆ. ಅದಕ್ಕೆ ನೂರಾರು ವರ್ಷದ ಇತಿಹಾಸವಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದರ ಪಾತ್ರ ಮಹತ್ವದ್ದಿದೆ. ಗಾಂಧಿ, ನೆಹರು, ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಭೋಸ್‌ರಾದಿಯಾಗಿ ಅನೇಕರು ಭಾಷಣ ಮಾಡಿ ಜನರನ್ನು ಪ್ರಚೋದಿಸಿದ ಜಾಗ ಅದು. ಅಲ್ಲದೇ ಅದರ ಬುಡದಲ್ಲಿ ದೇವರ ವಿಗ್ರಹಗಳನ್ನಿಟ್ಟು ಜನ ಪೂಜೆ ಮಾಡುತ್ತಾರೆ. ಅದರ ಬಗ್ಗೆ ಸ್ಥಳೀಯ ಜನರಿಗೆ ವಿಪರೀತವಾದ ಭಕ್ತಿ ಇದೆ. ಅನೇಕ ದಂತಕಥೆಗಳೂ ಇವೆ. ಅದನ್ನು ಭಗ್ನಗೊಳಿಸುವುದರಿಂದ ಅವರ ಭಾವನೆಗಳಿಗೆ ಭಂಗ ಉಂಟುಮಾಡಿದಂತಾಗುತ್ತದೆ. ಆದ್ದರಿಂದ ಅಲೈನ್‌ಮೆಂಟ್ ಬದಲಾಯಿಸಿ ಪ್ರತ್ಯೇಕವಾಗಿ ಡಿಪಿಆರ್ ತಯಾರಿಸಲಾಗುತ್ತಿದೆ... ಸದ್ಯದಲ್ಲೇ ಕಾಮಗಾರಿ ಆರಂಭಿಸುತ್ತೇವೆ...' ಎಂದು ನನ್ನ ಬಗ್ಗೆ ತಮಗೆ ಇರುವ ನಂಬಿಕೆಗಳನ್ನು ಹೇಳಲಾರದೇ ತೇಲಿಸಿ ಸಮಜಾಯಿಷಿ ನೀಡಿದರೂ ಸಂಬಂಧಪಟ್ಟ ಮಂತ್ರಿಗಳು, ಅದಾಗಲೇ ಹೇಗೋ ಮುಖ್ಯಮಂತ್ರಿಯೇ ತಡೆಯೊಡ್ಡುತ್ತಿದ್ದಾರೆ ಎಂಬ ವಿಷಯ ತಿಳಿದುಕೊಂಡಿದ್ದವರು, 'ನಂಬಿಕೆ, ಮೂಢನಂಬಿಕೆಗಳಿಗೆಲ್ಲ ಅಷ್ಟೊಂದು ಬೆಲೆ ಕೊಡಬಾರದು... ನಮಗೆ ಪ್ರಗತಿ ಮುಖ್ಯ. ದೇಶ ಅಭಿವೃದ್ಧಿಯಾಗಬೇಕೆಂದರೆ ಇಂಥ ಮೌಢ್ಯದ ಚಿಂತನೆಗಳನ್ನು ಕೈಬಿಡಬೇಕಾಗುತ್ತದೆ' ಎಂದು ಇವರನ್ನು ಒಳ್ಳೆ ಹಳೇ ಕಾಲದ ಬಫೂನಿನಂತೆ ಬಿಂಬಿಸಿ, 'ಅದರಿಂದಾಗಿ ನಾಲ್ಕೈದು ರಾಜ್ಯಗಳ ಸಂಪರ್ಕದಲ್ಲಿ ವಿಳಂಬವಾಗುತ್ತಿದೆ. ನನಗೆ ಯಾವುದೇ ಸಬೂಬು ಹೇಳದೇ ಕೂಡಲೇ ಆ ಮರವನ್ನು ಕಡಿದು ಬಿಸಾಕಿ... ಮುಂದಿನ ಸಭೆಗೆ ಬರುವುದರೊಳಗೆ ಅಲ್ಲಿನ ಕೆಲಸ ಮುಗಿದಿರಬೇಕು. ಅದನ್ನು ಬಿಟ್ಟು ಯಾವ ಸಬೂಬೂ ಹೇಳಕೂಡದು... ನಿಮಗೆ ಗೊತ್ತೇ ಇದೆ, ಇದು ಪ್ರಧಾನಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆ ಅಂತ...' ಎಂದವರು ಮತ್ತೆ ಮಾತು ಮುಂದುವರೆಸಿ, 'ಈ ಸಣ್ಣ ಕೆಲಸಕ್ಕೆ ನೀವು ಇಷ್ಟೊಂದು ಸಬೂಬು ಹೇಳುವುದನ್ನು ನೋಡಿದರೆ ಅತಿ ಮಹತ್ವಾಕಾಂಕ್ಷೆಯ ನದಿಜೋಡಣೆ ಕೆಲಸವನ್ನು ಹೇಗೆ ಮಾಡ್ತೀರೋ ಎಂಬ ಅನುಮಾನ ಬರುತ್ತೇರೀ... ಇದು ಬರೀ ಭೂಮಿ ಮೇಲಿನ ಕೆಲಸ, ಅದು ಭೂಮಿಯನ್ನು ಬಗಿದು ಮಾಡಬೇಕಾದ ಕೆಲಸ. ಅಲ್ಲಿ ನೂರಾರು ದೇವಸ್ಥಾನ, ಚರ್ಚು, ಮಸೀದಿಗಳನ್ನೇ ಕೆಡವಬೇಕಾಗಿ ಬರಬಹುದು. ಅಂಥವನ್ನೆಲ್ಲ ಇನ್ನು ಅದ್ಹೆಂಗೆ ನಿಭಾಯಿಸ್ತೀರೋ...' ಎಂದು ನೀವು ಕೆಲಸ ಮಾಡಲು ನಾಲಾಯಕ್ಕು ಎಂಬುದನ್ನು ಅನೇರವಾಗಿ ಬಿಂಬಿಸಿ ಅಪಹಾಸ್ಯದ ನಗೆ ನಕ್ಕು, ಕೊಂಕು ಮಾತಾಡಿದ್ದನ್ನು ಅವರಿಗಿಂತ ಮೂವತ್ತು ವರ್ಷಕ್ಕೂ ಮಿಕ್ಕಿ ವಯಸ್ಸಾಗಿದ್ದ ಮುಖ್ಯಮಂತ್ರಿಗಳು ಸಹಿಸದಾದರು.

ಊರಿಗೆ ಬಂದ ಮುಖ್ಯಮಂತ್ರಿಗಳು ತಾವೇ ಸ್ಥಳ ಪರಿಶೀಲನೆಗೆ ಬರುವುದಾಗಿ ಸಂಬಂಧಪಟ್ಟವರಿಗೆಲ್ಲ ತಿಳಿಸಿದರು. ಎರಡೂ ಕಡೆ ತಿರುವು ಪಡೆದು ವೃತ್ತಾಕಾರವಾಗಿ ಬಳಸಿ ನನ್ನನ್ನು ಉಳಿಸಬೇಕೆಂಬುದು ಅವರ ಆಶಯವಾಗಿತ್ತು.

ಅಲ್ಲಿಗೆ ಬಂದು ನೋಡಿದರೆ, ಒಂದು ಕಡೆ ತಮ್ಮದೇ ಆದ ಫೈವ್ ಸ್ಟಾರ್ ಹೋಟೆಲ್, ಇನ್ನೊಂದು ಕಡೆಗೆ ತಮ್ಮದೇ ಪಕ್ಷದ ಇನ್ನೊಬ್ಬ ಪ್ರಭಾವಿ ಶಾಸಕ ಶಂಕರಪ್ಪನ ಕಟ್ಟಡಗಳು! ಆತನೂ ಹಿಂದೆ ಉಪಮುಖ್ಯಮಂತ್ರಿಯಾಗಿದ್ದಾತ. ಸದಾ ತಮ್ಮ ಕಾಲನ್ನು ಎಳೆದು ಮುಖ್ಯಮಂತ್ರಿಯಾಗಲು ತುದಿಗಾಲ ಮೇಲೆ ನಿಂತಿದ್ದವನು. ಸಂಪೂರ್ಣ ಮೆಜಾರಿಟಿ ಇಲ್ಲದ ಇಂಥ ದುರಿತ ಸಂದರ್ಭದಲ್ಲಿ ಅವರನ್ನು ಎದುರು ಹಾಕಿಕೊಳ್ಳುವುದು ಹೇಗೆ? ಹಾಗೆ ಮಾಡುವುದರಿಂದ ತಮ್ಮ ಅಧಿಕಾರವನ್ನು ತಾವೇ ತಮ್ಮ ಕೈಯಾರೆ ಕಳೆದುಕೊಳ್ಳಬೇಕಾಗುತ್ತದೆ ಎಂಬುದು ಅವರ ಅರಿವಿಗೆ ಬಂತು. ಇಬ್ಬರ ಕಟ್ಟಡಗಳನ್ನೂ ಅರ್ಧರ್ಧ ಕೆಡವಿ ರಸ್ತೆಗೆ ಬಿಟ್ಟುಕೊಟ್ಟರೆ ಹೇಗೆ ಎಂಬ ಆಲೋಚನೆ ಹೀಗೆ ಬಂದು ಹಾಗೆ ಹೋದರೂ, ನನಗಿಂತ ಅವರಿಗೆ ಅವರ ಆಸ್ತಿ ಉಳಿಯಬೇಕೆಂಬುದು ಹೆಚ್ಚಾದದ್ದು ಆಶ್ಚರ್ಯವೇನಲ್ಲ. ಆದರೆ ಹಾಗಂತ ಎಲ್ಲೂ ಬಾಯಿಬಿಟ್ಟು ಹೇಳಲಿಲ್ಲ. ಒಂದು ವೇಳೆ ತಾನು ಅಧಿಕಾರದಿಂದ ಇಳಿಯುವ ಮೊದಲೇ ಈ ಕೆಲಸ ಮಾಡಿಸದೇ ಇದ್ದರೆ, ಬರುವ ಮುಂದಿನ ಮುಖ್ಯಮಂತ್ರಿಯಿಂದ ತನ್ನ ಕಟ್ಟಡಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದು ಮನವರಿಕೆಯಾಗಿಹೋಯಿತು.

ಪದಚ್ಯುತಗೊಂಡ ಮೇಲೆ ತಮ್ಮ ವಿರೋಧ ಪಕ್ಷದ ಮುಖ್ಯಮಂತ್ರಿಯೇ ಏಕೆ, ಒಬ್ಬ ಸಾಮಾನ್ಯ ಶಾಸಕ, ಮಂತ್ರಿಯೂ ತಮ್ಮ ಮಾತು ಕೇಳುವುದಿಲ್ಲವೆಂಬುದು ಅವರಿಗೆ ಗೊತ್ತಿತ್ತು. ಕೇಳುವುದೇನು, ಬೇಕೆಂದೇ ಅಂಥ ಆಲೋಚನೆಯನ್ನು ಹರಿಬಿಟ್ಟು ಜನಾಭಿಪ್ರಾಯ ಎನ್ನುವಂತೆ ಬಿಂಬಿಸಿ, ತಮ್ಮ ಅಸ್ತಿಯನ್ನು ಮಟಾಶ್ ಮಾಡದೇ ಇರರು ಎಂಬುದರ ಅರಿವೂ ಇತ್ತು. ಈಗ ಏನು ಮಾಡಬೇಕೆಂಬುದೇ ಅವರಿಗೆ ತಿಳಿಯದಾಯಿತು. ಸೇರಿದ್ದ ಅಧಿಕಾರಿಗಳಿಗೆ ಬೈಪಾಸು ಏನಾದರೂ ಮಾಡಿ ಸಂಪರ್ಕ ಕಲ್ಪಿಸಲು ಸಾಧ್ಯವೇ ಪರಿಶೀಲಿಸಿ ಎಂದು ಆಜ್ಞಾಪಿಸಿದರು. ಅಲ್ಲಿ ನದಿ ಸುತ್ತುವರಿದು ಬರುವುದರಿಂದ ಹಾಗೆ ಮಾಡಲು ಅಸಾಧ್ಯವೆಂಬ ಸಿದ್ಧ ಉತ್ತರದಿಂದ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಅದೂ ಸರಿ ಅನ್ನಿಸಿತು. ಸದ್ಯಕ್ಕೆ ಉಳಿದಿರುವ ಒಂದೇ ದಾರಿ ಎಂದರೆ ನನ್ನನ್ನು ಕಡಿಯುವುದು ಅಷ್ಟೇ... ಅದಕ್ಕಿಂತ ಸುಲಭವಾದ ಇನ್ನಾವ ಆಲೋಚನೆಯೂ ನನಗೂ ಹೊಳೆಯಲಿಲ್ಲ. ಅಂಥದೊಂದು ದಾರಿ ಇದ್ದಿದ್ದರೆ ಅವರ ತಲೆಗೆ ಆ ಆಲೋಚನೆಯನ್ನು ತೂರಿ ನಾನು ಬಚಾವಾಗಿ ಬಿಡಬಹುದಾಗಿತ್ತು. 'ಈ ಮರದ ಬಗ್ಗೆ ಜನರಿಗೆ ವಿಪರೀತವಾದ ನಂಬಿಕೆಯಿದೆ. ಅದನ್ನು ಕಡಿಯಲು ಹೋದರೆ ಜನ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ ಎಂಬುದರ ಅರಿವೂ ನಿಮಗಿದೆ. ಆದರೆ ನನ್ನ ಹೆಸರು ಬರದಂತೆ ಪ್ರಾಜೆಕ್ಟ್ ಮುಗಿಸಿ. ಹೇಗೆ ನಿಭಾಯಿಸುತ್ತೀರೋ ಗೊತ್ತಿಲ್ಲ...' ಎಂದು ಹೇಳಿ ಕಾರು ಹತ್ತಿ ಹೊರಟೇಬಿಟ್ಟರು.

ಅಂದರೆ ಅದರರ್ಥ, ಅವರ ಹೆಸರಿಗೆ ಕಳಂಕ ಬರದಂತೆ ಕಡಿಯಲು ನೀಡಿದ ಅನುಮತಿಯೆಂದೇ ಭಾವಿಸಿದ ಅಧಿಕಾರಿಗಳು, ನಾನಿಲ್ಲದಂಥ ರಸ್ತೆಯ ರೂಪುರೇಷೆಯನ್ನು ಒಂದು ಕಡೆ ಸಿದ್ಧಪಡಿಸುತ್ತಿದ್ದರೆ, ಇನ್ನೊಂದು ಕಡೆ ನನ್ನನ್ನು ಹೇಗೆ ಕತ್ತರಿಸಬೇಕು, ಹೇಗೆ ಸಾಗಿಸಬೇಕು ಎಂಬೆಲ್ಲ ಅಂದಾಜಿನ ಪಟ್ಟಿ ಸದ್ದಿಲ್ಲದೇ ಸಿದ್ಧವಾಗುತ್ತಿತ್ತು. ಕಾದು ನೋಡುವ ತಂತ್ರ ಅನುಸರಿಸಿದ್ದ ಮೆಟ್ರೋದವರು ಗರಿಗೆದರಿಕೊಂಡು ಓಡಾಡಲಾರಂಭಿಸಿದರು. ಇಲ್ಲಿ ಏನಾಗುತ್ತಿದೆ, ಮುಖ್ಯಮಂತ್ರಿಗಳ ಭೇಟಿಯ ತೀರ್ಮಾನವೇನಾಯಿತು ಎಂಬ ಯಾವ ವಿವರಗಳೂ ಯಾರಿಗೂ ತಲುಪಲಿಲ್ಲ, ಅಷ್ಟು ಗೌಪ್ಯವಾಗಿ ಎಲ್ಲವೂ ನಡೆಯುತ್ತಿತ್ತು.

ಭೂಸ್ವಾಧೀನ ಶಾಖೆಯವರು ಆಕ್ರಮಿಸಬೇಕಾದ ಭೂಮಿಯ ಸರ್ವೆ ನಡೆಸಿ, ಪರಿಹಾರದ ಬೆಲೆಯನ್ನು ನಿಗದಿಪಡಿಸಲಾರಂಭಿಸಿದರು. ಪುನರ್ವಸತಿ ಶಾಖೆಯವರು ಬಂದು ಬೀದಿ ಬದಿಯ ತಳ್ಳುಗಾಡಿಯವರು, ಪೆಟ್ಟಿಗೆ ಅಂಗಡಿಯವರು, ಬಾಡಿಗೆ ಅಂಗಡಿಮನೆಗಳ ಮೌಲ್ಯವನ್ನು ಲೆಕ್ಕಹಾಕಿ ಬೆಲೆ ನಿರ್ಧರಿಸಲಾರಂಭಿಸಿದರು. ಅವರುಗಳಿಗೆಲ್ಲ ಸೀಲುಸಹಿ ಹಾಕಿದ ಗುರುತಿನ ಚೀಟಿಗಳನ್ನು ನೀಡಿ, ತಾತ್ಕಾಲಿಕ ಷೆಡ್ಡುಗಳ ಜೊತೆ ಅವರನ್ನು ನಿಲ್ಲಿಸಿ ಫೋಟೊ ತೆಗೆಸಿಕೊಂಡರು. ವಿದೇಶೀ ಬ್ಯಾಂಕುಗಳ ಮಾನದಂಡದ ಪ್ರಕಾರ ಭೂಮಿ ಕಳೆದುಕೊಂಡವರಿಗಿಂತ ಇಂಥ ತಾತ್ಕಾಲಿಕ ವಾರಸುದಾರರ ಮೌಲ್ಯವೇ ಅಧಿಕವಾಗಿತ್ತು.

ಮೂಲೆಯ ಖಾರ ಮಂಡಕ್ಕಿ ಅಂಗಡಿಯ ಶಾಂತಮ್ಮ, 'ತನಗೆ ಮೂರು ತಬ್ಬಲಿ ಹೆಣ್ಣುಮಕ್ಕಳಿವೆ. ಅವುಗಳಿಗೆ ಒಂದು ನೆಲೆ ಒದಗಿಸಬೇಕು. ಇದನ್ನು ಬಿಟ್ಟರೆ ನನಗೆ ಬೇರೆ ಆದಾಯದ ಮೂಲವಿಲ್ಲ. ದಿನಕ್ಕೆ ಹೆಂಗೋ ಎರಡು ಸಾವಿರ ಮೂರು ಸಾವಿರ ವ್ಯಾಪಾರ ಮಾಡಿಕೊಂಡು ದುಡ್ಡು ಕೂಡಿಡ್ತಾ ಇದ್ದೆ. ಇವರು ಕೊಡೋ ಅಲ್ಪಸೊಲ್ಪ ಪರಿಹಾರ ತಗಂಡು ಬೇರೆ ಕಡೆ ಅಂಗಡಿ ಮಾಡಿದ್ರೂ ವ್ಯಾಪಾರ ಆಗಾಕಿಲ್ಲ. ಏನಾದ್ರೂ ಮಾಡಿ ಕಂಟ್ರಾಕ್ಟರಿಗೆ ಹೇಳಿ ಇನ್ನೊಂದಷ್ಟು ಜಾಸ್ತಿ ಪರಿಹಾರ ಕೊಡ್ಸಿ...' ಅಂತ ಸ್ಥಳೀಯ ಎಂ.ಎಲ್.ಎ. ಶಂಕರಪ್ಪನ ಮನೆಗೇ ಹೋಗಿ ಗಂಟುಬಿದ್ದಳು.

(ಸಶೇಷ)